# ವಾರ್ತಾ ವಿಶ್ಲೇಷಣೆ

# ಮಕ್ಕಳ ಮೇಲೆ ಇಂಟರ್‌ನೆಟ್‌ನ ಪ್ರಭಾವ

ಇಂದು ಇಂಟರ್‌ನೆಟ್ ಬಗ್ಗೆ ಯಾರಿಗೆ ತಾನೇ ಗೊತ್ತಿಲ್ಲ? ಕಂಪ್ಯೂಟರ್‌ಗಳ ಬಳಕೆ ಅಧಿಕವಾಗುತ್ತಿದ್ದಂತೆ ಇಂಟರ್‌ನೆಟ್ ಬಳಕೆ ಕೂಡ ವ್ಯಾಪಕವಾಗುತ್ತಲಿದೆ. ೧೯೯೮ ರಲ್ಲಿ ೨೦೦ ಮಿಲಿಯನ್ ಜನರು ಅಂತರ್ಜಾಲವನ್ನು ಬಳಸುತ್ತಿದ್ದರು. ಈಗ ಆ ಸಂಖ್ಯೆ ೧.೯ ಬಿಲಿಯನ್ ಆಗಿದೆ. ಅಂದರೆ ಶೇ. ೮೦೦ ರಷ್ಟು ಹೆಚ್ಚಾಗಿದೆ. ಇದಕ್ಕಿಂತ ಅಚ್ಚರಿಯ ಸಂಗತಿಯೆಂದರೆ, ಇಂಟರ್‌ನೆಟ್ ಅನ್ನು ಉಪಯೋಗಿಸುವವರಲ್ಲಿ ಶೇ. ೯೦ ಭಾಗ, ಮಕ್ಕಳು ಮತ್ತು ಹದಿಹರಯದವರು. ಅವರಲ್ಲಿ ಶೇ. ೬೦ ಭಾಗದಷ್ಟು ಯುವಜನರು ಚಾಟ್ ರೂಂಗಳಲ್ಲಿ ಪ್ರತಿನಿತ್ಯವೂ ಆನ್‌ಲೈನ್ ಸಂಭಾಷಣೆ ನಡೆಸುತ್ತಾರೆ. ಮೂರನೆಯ ಒಂದು ಭಾಗದಷ್ಟು ಮನೆಗಳಲ್ಲಿ ಮಾತ್ರ ಇಂಟರ್‌ನೆಟ್ ಬಳಕೆಯನ್ನು ನಿಯಂತ್ರಿಸುವ ಸುರಕ್ಷಾ ವಿಧಾನಗಳನ್ನು ಉಪಯೋಗಿಸುತ್ತಿದ್ದಾರೆ. ಉಳಿದ ಬಹಳಷ್ಟು ಗೃಹಗಳಲ್ಲಿ ಈ ಬಗೆಯ ಯಾವುದೇ ನಿಯಂತ್ರಣವಿಲ್ಲ.

ಇನ್ನೊಂದು ಆತಂಕಕಾರಿ ವಿಷಯವೆಂದರೆ ಮುಕ್ಕಾಲು ಭಾಗ ಮಕ್ಕಳು ತಮ್ಮ ಮತ್ತು ತಮ್ಮ ಕುಟುಂಬದ ವೈಯಕ್ತಿಕ ಮಾಹಿತಿಯನ್ನು ಇಂಟರ್‌ನೆಟ್‌ನಲ್ಲಿ ಅಪರಿಚಿತರಿಗೆ ನೀಡುತ್ತಾರೆ. ಐದನೆಯ ಒಂದು ಭಾಗದಷ್ಟು ಮಕ್ಕಳು, ಆನ್‌ಲೈನ್ ನಲ್ಲಿ ಇರುವಾಗ, ಯಾರೋ ತಮ್ಮ ಮೇಲೆ ಆಕ್ರಮಣ ಮಾಡುತ್ತಿದ್ದಾರೆಂದು ಹೇಳುತ್ತಾರೆ. ಇಂತಹ ಆಕ್ರಮಣಕಾರರನ್ನು predators ಎಂದು ಕರೆಯುತ್ತಾರೆ. ಆದರೆ ವಿಷಾದದ ಸಂಗತಿಯೆಂದರೆ, ಇಂಟರ್‌ನೆಟ್‌ನಲ್ಲಿ ತಮಗೆ ಎದುರಾಗುವ ಅಸಹಜ, ಅಶ್ಲೀಲ ಸಂಗತಿಗಳನ್ನು ಬಹುತೇಕ ಮಕ್ಕಳು ತಮ್ಮ ಪೋಷಕರಿಗೆ ತಿಳಿಸುವುದೇ ಇಲ್ಲ.

ಇದರಿಂದ ಪಾರಾಗುವುದು ಹೇಗೆ? ೧. ಮಕ್ಕಳು ತಮ್ಮ ಅಥವಾ ತಮ್ಮ ಕುಟುಂಬದ ಬಗೆಗಿನ ಮಾಹಿತಿಯನ್ನು ಇಂಟರ್‌ನೆಟ್‌ನಲ್ಲಿ ಯಾರಿಗೂ ನೀಡಬಾರದು. ೨. ಬೆದರಿಸುವ ಅಥವಾ ಅಶ್ಲೀಲ ಸಂದೇಶಗಳು, ಚಿತ್ರಗಳು ಪರದೆಯಲ್ಲಿ ಮೂಡಿಬಂದರೆ, ತತ್‌ಕ್ಷಣವೇ ತಂದೆತಾಯಿಗಳಿಗೆ ತಿಳಿಸಿ, ಅವರ ಮಾರ್ಗದರ್ಶನದಂತೆ ನಡೆಯಬೇಕು. ೩. ನಿಮ್ಮ ಪೋಷಕರ ಅನುಮತಿ ಇಲ್ಲದೆ ನಿಮ್ಮ ಭಾವಚಿತ್ರವನ್ನು ಯಾರಿಗೂ ಕಳಿಸಬೇಡಿ. ೪. ಬೆದರಿಸುವ, ಅಶ್ಲೀಲ ಅಥವಾ ಅಪಾಯಕಾರಿಯೆಂದು ಕಂಡುಬರುವ ಸಂದೇಶಗಳಿಗೆ ಉತ್ತರಿಸಬೇಡಿ. ೫. ಇಂಟರ್‌ನೆಟ್‌ನಲ್ಲಿ ಸಂಪರ್ಕಿಸಿರುವ ವ್ಯಕ್ತಿಯನ್ನು, ನಿಮ್ಮ ಪೋಷಕರ ಅನುಮತಿ ಇಲ್ಲದೆ, ಮುಖತಃ ಭೇಟಿಯಾಗಲು ಹವಣಿಸಬೇಡಿ. ೬. ನಿಮ್ಮ ಪಾಸ್‌ವರ್ಡ್ ಅನ್ನು ಯಾರಿಗೂ ನೀಡಬೇಡಿ.

ಇದು ಮಕ್ಕಳು ಕೈಗೊಳ್ಳಬೇಕಾದ ಮುಂಜಾಗರೂಕತಾ ಕ್ರಮಗಳಾದರೆ, ಪೋಷಕರ ಜವಾಬ್ದಾರಿ ಇನ್ನೂ ಹೆಚ್ಚಿನದು. ೧. ನಿಮ್ಮ ಮಕ್ಕಳು ಅಸಹಜ ರೀತಿಯಲ್ಲಿ ವರ್ತಿಸುತ್ತಿದ್ದರೆ, ಅದನ್ನು ಗಮನಿಸಿ, ಕಾರಣವನ್ನು ತಿಳಿದುಕೊಳ್ಳಿ. ೨. ಅವರು ಸಿಕ್ಕಾಪಟ್ಟೆ ಫೋನ್ ಕರೆಗಳನ್ನು ಮಾಡುತ್ತಿದ್ದರೆ, ಇಂಟರ್‌ನೆಟ್ ಅನ್ನು ಒಬ್ಬಂಟಿಗರಾಗಿ ಸರಿರಾತ್ರಿಯವರೆಗೂ ಉಪಯೋಗಿಸುತ್ತಿದ್ದರೆ, ಅವರನ್ನು ಒಡನೆ ನಿಯಂತ್ರಿಸಿ.

ಮಕ್ಕಳನ್ನು ಇಂಟರ್‌ನೆಟ್‌ನ ಭೀಕರ ಪರಿಣಾಮಗಳಿಂದ ರಕ್ಷಿಸುವುದು ಅತಿ ಮುಖ್ಯವಾದುದು. ಅದಕ್ಕಾಗಿ ಮೂರು ಹಂತಗಳ ರಕ್ಷಣಾವ್ಯವಸ್ಥೆಯನ್ನು ಜಾರಿಗೆ ತರುವುದು ಅತ್ಯವಶ್ಯ. ೧. ಇಂಟರ್‌ನೆಟ್‌ನಲ್ಲಿ ಎದುರಾಗಬಹುದಾದ ಅಪಾಯಗಳ ಅರಿವು. ೨. ನೀವು ಪಡೆದ ಮಾಹಿತಿಗಳನ್ನು ಮನದಟ್ಟಾಗುವಂತೆ ಮಕ್ಕಳಿಗೆ ತಿಳಿಹೇಳುವುದು. ೩. ಇಂಟರ್‌ನೆಟ್‌ನಲ್ಲಿ ಬರುವ ಅಪಾಯಕಾರಿ ಸಂದೇಶಗಳು ಮತ್ತು ವೆಬ್‌ಸೈಟ್‌ಗಳನ್ನು ತಡೆಹಿಡಿಯುವುದಕ್ಕೆ ಪ್ರಭಾವಶಾಲಿಯಾದ ಸಾಫ್ಟ್‌ವೇರ್‌ಗಳನ್ನು ಸ್ಥಾಪಿಸುವುದು.

ಮಕ್ಕಳ ಮೇಲೆ ಇಂಟರ್‌ನೆಟ್ ಬೀರುತ್ತಿರುವ ಆಘಾತಕಾರಿ ಪ್ರಭಾವವನ್ನು ತಡೆಗಟ್ಟಲು ವಿಶ್ವಸಂಸ್ಥೆಯ ಅಂಗಸಂಸ್ಥೆಯಾದ ಅಂತರರಾಷ್ಟ್ರೀಯ ಟೆಲಿಕಾಂ ಯೂನಿಯನ್ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಇದರ ಸೆಕ್ರೆಟರಿ ಜನರಲ್ ಹೇಳುವುದಿಷ್ಟು: "ಇಂಟರ್‌ನೆಟ್ ಅನೇಕ ಸವಾಲುಗಳನ್ನು ತಂದೊಡ್ಡಿದೆ. ಮಕ್ಕಳು ಮತ್ತು ಹದಿಹರಯದವರು ಇಂಟರ್‌ನೆಟ್‌ನ ಮುಕ್ತ, ಅನಿಯಂತ್ರಿತ ಜಗತ್ತಿನಲ್ಲಿ ವಿಹರಿಸುತ್ತಿದ್ದಾರೆ. ಅಲ್ಲಿರುವ ಅಗಾಧ ಮಾಹಿತಿಯನ್ನು ಅರಗಿಸಿಕೊಳ್ಳುತ್ತಿದ್ದಾರೆ, ವಿಡಿಯೋ ಸಂಗ್ರಹಾಲಯಗಳಿಗೆ ಸಂಪರ್ಕ ಪಡೆದುಕೊಂಡಿದ್ದಾರೆ, ಚಾಟ್ ಕೊಠಡಿಗಳನ್ನು ಪ್ರವೇಶಿಸುತ್ತಿದ್ದಾರೆ, ತಮ್ಮದೇ ಆದ ಸಾಮಾಜಿಕ ಜಾಲವನ್ನು (ಸೋಷಿಯಲ್ ನೆಟ್ ವರ್ಕಿಂಗ್) ಕಟ್ಟಿಕೊಂಡಿದ್ದಾರೆ. ಆ ಮೂಲಕ ಅವರು ನೈಜ ಜಗತ್ತಿನಲ್ಲಿ ನಾವು ದೂರವಿಡುವ ಸಮಾಜದ ಹಲವು ಪಾಶವೀ ಶಕ್ತಿಗಳ ಪ್ರಭಾವಕ್ಕೆ ಒಳಗಾಗುತ್ತಿದ್ದಾರೆ."

ಈ ಜಗತ್ತೇ ಭ್ರಮೆಯೆಂದು ನಾವು ಕೇಳಿದ್ದೇವೆ. ಇನ್ನು ಇಂಟರ್‌ನೆಟ್ ಜಗತ್ತು, ನಿಜಕ್ಕೂ ಭ್ರಮೆಯೊಳಗಿನ ಭ್ರಮೆಯೇ ಸರಿ. ಈ ಕರಾಳ ಜಗತ್ತಿನಲ್ಲಿ, ವ್ಯಕ್ತಿಯೊಬ್ಬನ ಸ್ವಾಭಾವಿಕ ಮೇಧಾವಿತನವನ್ನೂ, ದೈವದತ್ತ ಶಕ್ತಿಗಳನ್ನೂ ನಿರ್ವೀರ್ಯಗೊಳಿಸುವ ದುಸ್ಸಾಹಸ ನಮ್ಮ ಯುವಜನತೆಗೆ ನಿಜಕ್ಕೂ ಮಾರಕ. ಭಗವಂತನ ಅಪೂರ್ವ ಸೃಷ್ಟಿಯನ್ನು ತೆರೆದ ಕಣ್ಣಿನಿಂದ ನೋಡುತ್ತ, ಅದರ ವಿಸ್ಮಯಗಳ ಬಗ್ಗೆ ಕಾತರದಿಂದ ಅರಿಯುತ್ತ, ಅದು ತಮಗೆ ನೀಡುವ ಹಲವಾರು ಆನಂದ ಮತ್ತು ಅಚ್ಚರಿಯ ಅನುಭವಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತ, ಸುಂದರ ಕುಸುಮಗಳಂತೆ ಅರಳಬೇಕಾದ ನಮ್ಮ ಯುವಚೇತನಗಳನ್ನು 'cyber space' ಎಂಬ ಕ್ರೂರ ಜಗತ್ತಿನಿಂದ ಪಾರು ಮಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಲ್ಲವೇ?